ISSN : 0302-9832

# SHODHAK

A Journal of Historical Research

## *Certificate of Publication*

This is to certify that the article entitled

**ಅಂಬೇಡ್ಕರ್ ಚಿಂತನೆಯಲ್ಲಿ ಜಾತಿವ್ಯವಸ್ಥೆಯ ಸ್ವರೂಪ ಮತ್ತು ವಿಶ್ಲೇಷಣೆ**

Authored By

**ಡಾ. ವೀಣಾ. ಈ**

ಸಹಾಯಕ ಪ್ರಾಧ್ಯಾಪಕರು, ರಾಜ್ಯಶಾಸ್ತ್ರ ವಿಭಾಗ. ಕೆ.ಎಲ್.ಇ ಸಂಸ್ಥೆಯ ಕಲಾ ಹಾಗೂ ವಾಣಿಜ್ಯ ಮಹಾವಿದ್ಯಾಲಯ, ಗದಗ

Published in

**Shodhak** : A Journal of Historical Research

ISSN : **0302-9832 (P)** with IF= **7.75**

Volume: **53,** Issue: **02,** No: **08,** May - August : **2023**

UGC CARE Group- 1, Sr. No: 381 (Arts and Humanities)

Peer Reviewed, Bilingual, Referred Journal

**Published By**

**National Organisation of Historians and Social Scientists**

UGC
University Grants Commission

CO-ORDINATOR
IQAC
K.L.E.S' Arts & Commerce College
GADAG

Editor
SHODHAK
Dr. Ram Pande

PRINCIPAL
K.L.E.Society's
Arts & Commerce College
GADAG-BETGERI-582101

**Shodhak** : A Journal of Historical Research
ISSN : **0302-9832**
Volume: **53**, Issue: **02**, No: **08**, May - August : **2023**

# ಅಂಬೇಡ್ಕರ್ ಚಿಂತನೆಯಲ್ಲಿ ಜಾತಿವ್ಯವಸ್ಥೆಯ ಸ್ವರೂಪ ಮತ್ತು ವಿಶ್ಲೇಷಣೆ

**ಡಾ. ವೀಣಾ. ಈ**, ಸಹಾಯಕ ಪ್ರಾಧ್ಯಾಪಕರು, ರಾಜ್ಯಶಾಸ್ತ್ರ ವಿಭಾಗ. ಕೆ.ಎಲ್.ಇ ಸಂಸ್ಥೆಯ ಕಲಾ ಹಾಗೂ ವಾಣಿಜ್ಯ ಮಹಾವಿದ್ಯಾಲಯ, ಗದಗ

**ಸಾರಾಂಶ**:

ಭಾರತೀಯ ಸಮಾಜ ಸುಧಾರಕರ ಪಟ್ಟಿಯಲ್ಲಿ ಗುರುತಿಸಿಕೊಳ್ಳುವ ಮೇರುನಾಯಕ ಡಾ. ಬಿ. ಆರ್. ಅಂಬೇಡ್ಕರ್‌ರವರಾಗಿದ್ದಾರೆ. ಅಂಬೇಡ್ಕರ್‌ರವರ ಪ್ರಕಾರ ಭಾರತೀಯ ಸಮಾಜದ ಸಾಮಾಜಿಕ ರಚನೆಯೇ ಜಾತಿವ್ಯವಸ್ಥೆಯಾಗಿದ್ದು, ಅದರ ಪರಿಣಾಮವಾಗಿ ಇಲ್ಲಿ ಜಾತಿ ತಾರತಮ್ಯ, ಶೋಷಣೆ, ದೌರ್ಜನ್ಯದಂತಹ ಅಮಾನವೀಯ ಸಂಗತಿಗಳು ಜಾರಿಯಲ್ಲಿವೆ. ಅಸ್ಪೃಶ್ಯರ ಸಮಸ್ಯೆಗಳಿಗೂ ಈ ಜಾತಿವ್ಯವಸ್ಥೆಗೂ ನೇರವಾದ ಸಂಬAಧವಿದ್ದು, ಅವುಗಳಿಂದ ಮುಕ್ತಿಹೊಂದಲು ಇರುವ ಏಕೈಕ ಮಾರ್ಗವೆಂದರೆ ಜಾತಿ ಹಾಗೂ ಜಾತಿವ್ಯವಸ್ಥೆಯ ವಿನಾಶವಾಗಿದೆ. ಆದರೆ, ಜಾತಿವ್ಯವಸ್ಥೆಯಂತಹ ಅಮಾವೀಯ ವ್ಯವಸ್ಥೆಯ ವಿರುದ್ಧ ಸಾಕಷ್ಟು ಹೋರಾಟಗಳು ನಡೆದಿದ್ದರೂ, ಅದು ವಿನಾಶವಾಗದಿರುವುದರ ಕುರಿತು ಬಹುಚರ್ಚಿತ ವಿಷಯವಾಗಿತ್ತು. ಅದಕ್ಕಾಗಿ ಜಾತಿವ್ಯವಸ್ಥೆಯ ಕುರಿತು ಸಾಕಷ್ಟು ಸಿದ್ಧಾಂತಗಳ ಪರಿಶೀಲನೆ ನಡೆಸುವ ಮೂಲಕ ಅದನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸಿದ್ದರು. ಹಾಗೂ ಜಾತಿವ್ಯವಸ್ಥೆ ಮತ್ತು ಅದರ ಪರಿಣಾಮದ ಕುರಿತು ಪರ್ಯಾಯ ವಿವರಣೆಗಳನ್ನು ಕಟ್ಟಿಕೊಡಲು ಪ್ರಯತ್ನಿಸಿದರು. ಇದರ ಜೊತೆಗೆ, ಜಾತಿತಾರತಮ್ಯವನ್ನು ಹೋಗಲಾಡಿಸಲು ಸಂವಿಧಾನಾತ್ಮಕವಾಗಿ ಪರಿಹಾರ ಮಾರ್ಗಗಳನ್ನು ಸೂಚಿಸುವ ಮೂಲಕ ಜಾತಿಸಮಸ್ಯೆಗಳನ್ನು ಹೋಗಲಾಡಿಸಲು ಪ್ರಯತ್ನಿಸುತ್ತಾರೆ. ಉದಾರಣೆಗೆ; ನಿಮ್ನವರ್ಗದವರಿಗೆ ಪ್ರತ್ಯೇಕ ರಾಜಕೀಯ ಕ್ಷೇತ್ರ, ಮೀಸಲು ಕ್ಷೇತ್ರ, ರಾಜಕೀಯ ಪ್ರಾತಿನಿಧ್ಯ ಇತ್ಯಾದಿ. ಇವುಗಳಿಂದ ಕ್ರಮೇಣವಾಗಿ ಸಮಾನತೆ ಸಮಾಜವು ರಚನೆಯಾಗುವ ಮೂಲಕ ಜಾತಿವ್ಯವಸ್ಥೆಯು ವಿನಾಶವಾಗುತ್ತದೆ ಎಂದು ಭಾವಿಸಿದ್ದರು. ಅಂಬೇಡ್ಕರ್ ಪ್ರತಿಪಾದಿಸಿದ ವಿಶೇಷ ಸೌಲಭ್ಯಗಳನ್ನೂ ಸಂವಿಧಾನತ್ಮಕವಾಗಿ ಜಾರಿಗೊಳಿಸಿದಾಗಿಯೂ ಪ್ರಸ್ತುತದಲ್ಲಿಯೂ ಜಾತಿವ್ಯವಸ್ಥೆಯ ದೌರ್ಜನ್ಯದ ಕುರಿತು ಹೋರಾಟಗಳು ಅಥವಾ ಚಳವಳಿಗಳು ನಡೆಯುತ್ತಿದ್ದು, ಅದನ್ನು ಅರ್ಥೈಸಿಕೊಳ್ಳಲು ಅಂಬೇಡ್ಕರ್ ಚಿಂತನೆಗಳು ಸಹಕರಿಸುತ್ತವೆಯೇ? ಎನ್ನುವ ಸಂಗತಿಯನ್ನು ಪ್ರಸ್ತುತ ಲೇಖನದಲ್ಲಿ ಪರಿಶೀಲಿಸಲಾಗುವುದು.

**ಮುಖ್ಯಪದಗಳು**: ಜಾತಿವ್ಯವಸ್ಥೆ, ಸಾಮಾಜಿಕ ರಚನೆ, ಅಸ್ಪೃಶ್ಯತೆ, ಸಾಮಾಜಿಕ ಸಿದ್ಧಾಂತಗಳು

## ೧. ಪೀಠಿಕೆ:

ಸಮಾಜವಿಜ್ಞಾನದ ಸಿದ್ಧಾಂತಗಳು ಭಾರತೀಯ ಸಮಾಜ ಸಾಮಾಜಿಕ ರಚನೆಯೆಂದು ಗುರುತಿಸಿರುವ ಜಾತಿವ್ಯವಸ್ಥೆಯನ್ನು ಹೆಚ್ಚು ತಾರ್ಕಿಕವಾಗಿ ವಿವರಿಸುವ ಪ್ರಯತ್ನವನ್ನು ಅಂಬೇಡ್ಕರ್‌ರವರು ಮಾಡಿದ್ದಾರೆ. ಅವರು "ಭಾರತದಲ್ಲಿ ಜಾತಿಗಳು: ಅವುಗಳ ರಚನಾಕ್ರಮ, ಹುಟ್ಟು ಮತ್ತು ಬೆಳವಣಿಗೆ" ಎನ್ನುವ ಪ್ರಬಂಧದಲ್ಲಿ 'ಜಾತಿಯ ನಿಗೂಢತೆಯ ಸಿಕ್ಕುಗಳನ್ನು ಬಿಡಿಸಲು, ಸಾಕಷ್ಟು ಲೇಖಕರು ಪಯತ್ನಿಸಿದ್ಯಾಗಿಯೂ ದುರಾದೃಷ್ಟವಶಾತ್ ಅದು ಇನ್ನೂ ವ್ಯಾಖ್ಯಾನಿಸದ ಸಾಮ್ರಾಜ್ಯದಲ್ಲಿದೆ, ಅರ್ಥವಾಗದ ಸಾಮ್ರಾಜ್ಯ ಎನ್ನುವುದನ್ನು ಮತ್ತೆ ಹೇಳಬೇಕಿಲ್ಲ. ಆದರೆ ಅದನ್ನು ಅರ್ಥಮಾಡಿಕೊಳ್ಳಲು ಸಾಧ್ಯವೆಂದು' ಅಭಿಪ್ರಾಯಪಡುತ್ತಾರೆ. ಈ ನೆಲೆಯಲ್ಲಿ ಜಾತಿ ಹಾಗೂ ಜಾತಿವ್ಯವಸ್ಥೆಯ ಕುರಿತ ಸಿದ್ಧಾಂತಗಳ ಪುನಾರವಲೋಕನದಲ್ಲಿ ತೊಡಗಿಸಿಕೊಂಡಿದ್ದರು.

## ೨. ಅಂಬೇಡ್ಕರ್ ಚಿಂತನೆಯನ್ನು ರೂಪಿಸಿ ಸೈದ್ಧಾಂತಿಕ ಹಿನ್ನಲೆ:

### ಜಾತಿ ಮತ್ತು ವೃತ್ತಿ:

ಮಾನವಶಾಸ್ತ್ರ ಮತ್ತು ಸಮಾಜಶಾಸ್ತ್ರೀÊಯ ಸಿದ್ಧಾಂತಗಳು ಜಾತಿವ್ಯವಸ್ಥೆಯನ್ನು ಚಿತ್ರಿಸುವಾಗ ವೃತ್ತಿಯನ್ನು ಪ್ರಮುಖ ಸಂಗತಿಯನ್ನಾಗಿ ಪರಿಗಣಿಸಿವೆ. ಅವುಗಳ ಪ್ರಕಾರ ಜಾತಿಯೆಂದರೆ 'ವೃತ್ತಿಯ



CO-ORDINATOR
IQAC
K.L.E.S' Arts & Commerce College
GADAG

PRINCIPAL
K.L.E.Society's
Arts & Commerce College
GADAG-BETGERI-582101

**Shodhak** : A Journal of Historical Research
ISSN : **0302-9832**
Volume: **53**, Issue: **02**, No: **08**, May - August : **2023**

ಗುಂಪಾಗಿದೆ'. ವೃತ್ತಿಯನ್ನು ಜಾತಿಯ ರಚನಾಂಶ ಎಂದು ಹಾಗೂ ವೃತ್ತಿ ಆಧಾರಿತ ಜಾತಿಗಳ ವಿಂಗಡನೆಯನ್ನು ಜಾತಿವ್ಯವಸ್ಥೆಯ ಪ್ರಮುಖ ಲಕ್ಷಣವೆಂದು ಗುರುತಿಸಲಾಗುತ್ತದೆ. ವೃತ್ತಿ ಆಧಾರಿತ ವಿಂಗಡನೆಯು ಹಿಂದೂ ರಿಲಿಜನ್ನಿನ ನಿಯಮಗಳಿಗೆ ಅನುಗುಣವಾಗಿ ನಡೆದಿದೆ ಎಂಬುದು ಚಿಂತಕರ ನಿಲುವು. ಅವರ ಪ್ರಕಾರ, ಹಿಂದೂಯಿಸA ವರ್ಣವ್ಯವಸ್ಥೆಯನ್ನು ಪೋಷಿಸಿಕೊಂಡು ಬರುತ್ತಿತ್ತು. ಈ ವರ್ಣವ್ಯವಸ್ಥೆಯಲ್ಲಿ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ ಎಂಬ ನಾಲ್ಕು ವರ್ಣಗಳು ಶ್ರಮವಿಭಜನೆಯ ಅಥವಾ ವೃತ್ತಿ ಗುಂಪುಗಳಾಗಿ ಅಸ್ತಿತ್ವದಲ್ಲಿದ್ದವು. ಆದರೆ, ವರ್ಣವ್ಯವಸ್ಥೆಯಲ್ಲಿ ಅರ್ಹತೆಗನುಗುಣವಾಗಿ ವೃತ್ತಿಯನ್ನು ಬದಲಾಯಿಸಿಕೊಳ್ಳುವ ಅಥವಾ ವರ್ಣದ ಸದಸ್ಯತ್ವವನ್ನು ಬದಲಾಯಿಸಿಕೊಳ್ಳುವ ಅವಕಾಶವಿತ್ತು. ಕಾಲಾನಂತರ ವರ್ಣವ್ಯವಸ್ಥೆಯು ಭ್ರಷ್ಟವಾಗುತ್ತಾ ಬಂದಿತು. ಮೇಲಿನ ವರ್ಣದವರು ತಮ್ಮ ಶ್ರೇಷ್ಠತೆಯನ್ನು ಉಳಿಸಿಕೊಳ್ಳಲು ಅನೇಕ ನಿರ್ಬಂಧಗಳನ್ನು ಹೇರಿದರು. ನಂತರ ವರ್ಣಗಳು ಹಲವಾರು ವೃತ್ತಿಗಳಾಗಿ ವಿಭಜನೆಗಳಾದವು, ವೃತ್ತಿಗನುಗುಣವಾಗಿ ಜಾತಿಗಳೂ ಸೃಷ್ಟಿಯಾದವು (ಅಬೆದುಬ್ವಾ, ೧೯೧೬. ಎಡ್ಗರ್ ಥರ್ಸ್ಟನ್, ೧೯೦೯. ರಿಸ್ಲೆ, ೧೯೫೧. ಎಂ.ಎನ್. ಶ್ರೀನಿವಾಸ್ ೨೦೦೪).

ಆದರೆ, ವೃತ್ತಿಯನ್ನು ಜಾತಿಯೊಂದಿಗೆ ಸಮೀಕರಿಸುವಲ್ಲಿ ಸಾಮಾನ್ಯ ಅನುಭವಕ್ಕೆ ಬರುವಂತೆ ಸಾಕಷ್ಟು ಅಡೆತಡೆಗಳಿವೆ. ಹಾಗಾಗಿ, ವೃತ್ತಿಯನ್ನು ಜಾತಿಯೊಂದಿಗೆ ಸಮೀಕರಿಸಿ ನೋಡುವುದು ಅಸಮಂಜಸವೆನಿಸುತ್ತದೆ. ಉದಾಹರಣೆಗೆ ಸಮಾಜದಲ್ಲಿ ಸಾವಿರಾರು ವೃತ್ತಿಗಳಿವೆ, ಆ ಎಲ್ಲಾ ನಿರ್ದಿಷ್ಟ ವೃತ್ತಿಗಳನ್ನು ನಿರ್ದಿಷ್ಟ ಜಾತಿಯವರೇ ಮಾಡುವುದು ಕಂಡುಬರುವುದಿಲ್ಲ. ಹಾಗೆಯೇ ಒಂದೇ ವೃತ್ತಿಯನ್ನು ಬೇರೆ ಬೇರೆ ಜಾತಿಯವರೂ ಮಾಡುತ್ತಾರೆ. ಉದಾಹರಣೆಗೆ; ವ್ಯವಸಾಯವನ್ನು ಒಕ್ಕಲಿಗರು ಮಾತ್ರ ಮಾಡದೇ ಲಿಂಗಾಯತ, ಬ್ರಾಹ್ಮಣ, ಮಡಿವಾಳ, ದೀವರು, ತಳವಾರ, ಮಾದಿಗ, ಲಂಬಾಣಿ ಜಾತಿಗಳಲ್ಲದೇ ಇನ್ನೂ ಅನೇಕ ಜಾತಿಗಳು ಹಾಗೂ ಮುಸ್ಲಿಂ ಸಮುದಾಯದವರೂ ಮಾಡುವುದು ಕಂಡುಬರುತ್ತದೆ. ಅದೇ ರೀತಿ ಸರ್ಕಾರಿ ಕೆಲಸ ಅಥವಾ ನೌಕರಿಯನ್ನು ಉದಾಹರಣೆಯಾಗಿ ಗಮನಿಸಿದರೆ, ಎಲ್ಲಾ ಜಾತಿಯವರೂ ಎಲ್ಲಾ ರೀತಿಯ ಕೆಲಸಗಳಲ್ಲಿ ಸ್ಥಾನಪಡೆದುಕೊಂಡಿದ್ದಾರೆ. ಉದಾಹರಣೆಗೆ; ಸೈನಿಕ ವೃತ್ತಿಯನ್ನು ತೆಗೆದುಕೊಂಡರೆ, ಎಲ್ಲಾ ಜಾತಿಯವರೂ ಸೈನಿಕರಾಗಿದ್ದಾರೆ ಅಥವಾ ಸೈನಿಕರಾಗಲು ಅವಕಾಶಗಳಿವೆ. ಆದರೆ ಈ ವೃತ್ತಿಯ (ಸರ್ಕಾರಿ ಕೆಲಸಗಳು: ಶಿಕ್ಷಕ, ಸೈನಿಕ, ಅಭಿಯಂತರ, ವಕೀಲ ಇತ್ಯಾದಿ) ಹೆಸರಿನ ಜಾತಿಗಳು ಅಸ್ತಿತ್ವದಲ್ಲಿಲ್ಲ. ಹಾಗೂ ಈ ಕುರಿತು ಜಾತಿವ್ಯವಸ್ಥೆಯ ಸಿದ್ಧಾಂತದ ಚೌಕಟ್ಟಿನಿಂದ ಸಮರ್ಥನೆಯೂ ಇರಬಹುದು; ಅಂದರೆ, ಮೊದಲು ಆಡಳಿತ ಅಥವಾ ಸರ್ಕಾರಿ ಹುದ್ದೆಗಳಲ್ಲಿಯೂ ಮೇಲ್ಜಾತಿಯವರಿಗೇ ಮಾತ್ರ ಅವಕಾಶಗಳಿದ್ದು, ಕ್ರಮೇಣ ಮೀಸಲಾತಿಯಂತಹ ಸೌಲಭ್ಯಗಳಿಂದ ಎಲ್ಲಾ ಜಾತಿಯವರೂ ಸರ್ಕಾರಿ ಹುದ್ದೆ ಪಡೆಯುವಂತಾಯಿತು ಎಂದು. ಆದರೆ ಈ ಸಮರ್ಥನೆಯು ವೃತ್ತಿ ಸಿದ್ಧಾಂತದ ಸಮಸ್ಯೆಗಳಿಗೆ ಸಮರ್ಥನೆಯಾಗುವುದಿಲ್ಲ. ಏಕೆಂದರೆ, ಜನರ ವೃತ್ತಿಯು ಬದಲಾದಂತೆ ಆ ವೃತ್ತಿಗೆ ಅನುಗುಣವಾಗಿ ಜನರ ಜಾತಿಯೂ ಬದಲಾಗಬೇಕಿತ್ತು. ಆದರೆ, ವಾಸ್ತವ ಇದಕ್ಕೆ ವಿರುದ್ಧವಾಗಿಯೇ ಇದೆ. ಈ ರೀತಿಯ ಅನೇಕ ಉದಾಹರಣೆಗಳು ಜಾತಿವ್ಯವಸ್ಥೆಯ ವೃತ್ತಿ ಸಿದ್ಧಾಂತಕ್ಕೆ ತದ್ವಿರುದ್ಧವಾಗಿವೆ. ಹಾಗೂ ಈ ನೆಲೆಯಲ್ಲಿ ಗಮನಿಸಿದಾಗ ವೃತ್ತಿಯು ಜಾತಿಯನ್ನು ನಿರ್ಧರಿಸುವ ಮಾನದಂಡವಾಗಲೂ ಸಾಧ್ಯವಿಲ್ಲ. ಆದರೆ ಚಿಂತಕರು ವೃತ್ತಿಸಿದ್ಧಾಂತಕ್ಕೆ ಎದುರಾಗುವ ಈ ರೀತಿಯ ವೈರುಧ್ಯತೆಯನ್ನು ವಿವರಿಸುವ ಬದಲಾಗಿ, ಮೂಲ ಜಾತಿವ್ಯವಸ್ಥೆ ಹಾಗಿದ್ದು, ಕ್ರಮೇಣ ಬದಲಾಗಿದೆ ಎಂಬ ಸರಳೀಕೃತ ಹೇಳಿಕೆಗಳನ್ನು ನೀಡುತ್ತಾರೆ. ಹಾಗಾಗಿ, ಈ ಎಲ್ಲಾ ಸಂಗತಿಗಳು ವೃತ್ತಿಯು ಜಾತಿಯ ರಚನಾಂಶವಾಗಿದೆ. ಹಾಗೂ ವೃತ್ತಿ ಆಧಾರಿತವಾಗಿ ಜಾತಿವ್ಯವಸ್ಥೆ ರಚನೆಯಾಗಿದೆ ಎನ್ನುವುದರ ಕುರಿತು ಸಮಸ್ಯೆಗಳಿರುವುದನ್ನು ಸೂಚಿಸುತ್ತದೆ. ಹಾಗೂ ಆ ಸಮಸ್ಯೆಗಳನ್ನು ಬಗೆಹರಿಸುವಲ್ಲಿ ಹಾಗೂ ಜಾತಿ ಹಾಗೂ ಜಾತಿವ್ಯವಸ್ಥೆಯನ್ನು ಅರ್ಥಮಾಡಿಕೊಳ್ಳುವಲ್ಲಿ ಜಾತಿಯ ಕುರಿತ ವೃತ್ತಿ ಸಿದ್ಧಾಂತವು ಯಾವುದೇ ಸಹಾಯ ಮಾಡುವುದಿಲ್ಲ. ಬದಲಾಗಿ ಮತ್ತಷ್ಟು ಗೊಂದಲವನ್ನು ಹುಟ್ಟುಹಾಕುತ್ತವೆ.

ಜಾತಿ ಮತ್ತು ವೃತ್ತಿಯ ಸಂಬAಧದ ಕುರಿತ ಈ ಮೇಲಿನ ವಿವರಣೆಗಳನ್ನು ಪರಿಶೀಲಿಸುವದರ ಜೊತೆಗೆ, ಜಾತಿ ಮತ್ತು ವೃತ್ತಿಯ ಸಂಬAಧದ ಕುರಿತು ಅನೇಕ ದ್ವಂದ್ವಗಳಿರುವುದನ್ನು ಗುರುತಿಸುವ ಅಂಬೇಡ್ಕರ್ ಹೀಗೆ ಹೇಳುತ್ತಾರೆ; ಒಂದು ಜಾತಿಯವರು ಹಿಂದಿನಿAದ ಅನುಸರಿಸಿಕೊಂಡು ಬಂದಿರುವ

CO-ORDINATOR
PRINCIPAL
K.L.E.Society's
Arts & Commerce College
GADAG-BETGERI-582101

**Shodhak** : A Journal of Historical Research
ISSN : **0302-9832**
Volume: **53**, Issue: **02**, No: **08**, May - August : **2023**
ವೃತ್ತಿಯನ್ನು ಮಾಡುತ್ತಾರೆ. ಜಾತಿಗೆ ಸಂಬAಧಿಸಿದ ವೃತ್ತಿಯು ಇಲ್ಲದಿದ್ದ ಸಂದರ್ಭದಲ್ಲಿ ತಮ್ಮ ತಂದೆಯು ಮಾಡುತ್ತಿದ್ದ ವೃತ್ತಿಯನ್ನು ಅನುಸರಿಸಲಾಗುತ್ತದೆ ಎನ್ನುತ್ತಾರೆ. ಇದು ಜಾತಿಗೆ ವಿಶಿಷ್ಟವಾದ ವೃತ್ತಿಯು ಇಲ್ಲದಿರುವ ಸಾಧ್ಯತೆಯಿರುವುದನ್ನು ಸೂಚಿಸುತ್ತದೆ. ಅಂದರೆ, ಇಲ್ಲಿ ವೃತ್ತಿಯು ಜಾತಿಯನ್ನು ನಿರ್ಧರಿಸುವ ಅಥವಾ ಅದನ್ನು ಸೃಷ್ಟಿಸುವ ಪ್ರಾಥಮಿಕ ನಿಬಂಧನೆಯಾಗಿದೆ ಎನ್ನುವ ಪ್ರತಿಪಾದನೆಯು ನಿರಾಕರಿಸಲ್ಪಡುವಂತೆ ತೋರುತ್ತದೆ. ಈ ನೆಲೆಯಲ್ಲಿ ಜಾತಿಯ ಉಗಮದ ಕುರಿತು ಹಲವು ಸಿದ್ಧಾಂತಗಳನ್ನು ಅಧ್ಯಯನ ಮಾಡಿ ಅವುಗಳ ಮಿತಿಯನ್ನು ಅಂಬೇಡ್ಕರ್‌ರವರು ಗುರುತಿಸಿದ್ದಾರೆ. ಹಾಗೂ ಆ ಎಲ್ಲಾ ವಿವರಣೆಗಳೂ ಹೇಗೆ ಅಸಮಂಜಸತೆಯಿAದ ಕೂಡಿವೆ ಎಂಬುದನ್ನು ತೋರಿಸಿಕೊಡುತ್ತಾರೆ (ಅಂಬೇಡ್ಕರ್, ೨೦೦೯: ೫-೨೩, ಸಂ-೧).

ಅಂಬೇಡ್ಕರ್‌ರವರ ಪ್ರಕಾರ; ಈ ಸಿದ್ಧಾಂತಗಳು (ನೆಸ್‌ಫೀಲ್ಡ್, ಸೆನಾರ್ಟ್, ರಿಸ್ಲೆ ಇತ್ಯಾದಿ ಚಿಂತಕರ ವಾದಗಳು) 'ಸಾಧಿಸಬೇಕಾದ ವಿಷಯವನ್ನೇ ಫಲಿತಾಂಶ ಎಂದಿಟ್ಟುಕೊಳ್ಳುವAತೆ' ಮಾರುವೇಷದ ರೂಪಗಳು,' ಭಾರತದಲ್ಲಿ ಇಡೀ ಜಾತಿವ್ಯವಸ್ಥೆ ರಚನೆಯಾಗಿರುವುದು ಅದು ನಿರ್ವಹಿಸುವ ಕಾರ್ಯದ ಮೇಲೆ ಮಾತ್ರ' ಎಂದು ನೇಸ್‌ಫೀಲ್ಡ್ ಹೇಳುತ್ತಾರೆ. ಈ ಹೇಳಿಕೆಯನ್ನು ನೀಡುವ ಮೂಲಕ ಅವರು ನಮ್ಮ ಆಲೋಚನೆಯನ್ನು ಅಷ್ಟೇನು ದೂರ ಕೊಂಡೊಯ್ಯುವುದಿಲ್ಲವೆAದು ಸರಿಯಾಗಿ ನೆನಪಿಸಬೇಕಾಗುತ್ತದೆ; ಭಾರತದಲ್ಲಿ ಜಾತಿಗಳು ಕ್ರಿಯಾತ್ಮಕ ಅಥವಾ ವೃತ್ತಿಪರವೆಂದೇ ಹೇಳಿದಂತಾಗುವ ಅವರ ಹೇಳಿಕೆ ತುಂಬ ಸಪ್ಪೆಯಾದ ಸಂಶೋಧನೆ; ವೃತ್ತಿಪರ ಗುಂಪು ವರತ್ತಿಪರ ಜಾತಿಯಾದದ್ದು ಏಕೆ ಎಂಬುದನ್ನು ನೆಸ್‌ಫೀಲ್ಡ್ ಇನ್ನೂ ಅರಿಯಬೇಕಾಗಿದೆ ಹಾಗೂ ಇದರಿಂದಾಗಿ ಈ ರೀತಿಯ ಗುಂಪುಗಳು ಎಲ್ಲ ದೇಶಗಳಲ್ಲಿ ಇದ್ದರೂ, ಅಲ್ಲಿ ಜಾತಿಗಳು ಏಕಿಲ್ಲ ಎಂಬ ಪ್ರಶ್ನೆಯೂ ಉಗಮವಾಗುತ್ತದೆ ಎನ್ನುತ್ತಾರೆ (ಅಂಬೇಡ್ಕರ್, ೨೦೦೯: ೧೭-೧೮).

ಅಸ್ಪೃಶ್ಯತೆಯ ಕುರಿತ ವೃತ್ತಿಸಿದ್ಧಾಂತವನ್ನು ಅಂಬೇಡ್ಕರ್‌ರವರು ವಿಮರ್ಶಿಸುತ್ತಾ ಅದನ್ನು ಒಪ್ಪಿಕೊಳ್ಳಲು ಎದುರಾಗುವ ಸಮಸ್ಯೆಯನ್ನು ಈ ಮುಂದಿನAತೆ ಗುರುತಿಸುತ್ತಾರೆ: "ಅಸ್ಪೃಶ್ಯರು ಅನುಸರಿಸುವ ಕೊಳಕು ಮತ್ತು ಕಶ್ಮಲ ಕಸುಬುಗಳು ಪ್ರತಿಯೊಂದು ಸಮಾಜದಲ್ಲೂ ಇವೆ. ಪ್ರತಿಯೊಂದು ಮಾನವ ಸಮಾಜದಲ್ಲೂ ಈ ಕಸುಬುಗಳನ್ನು ಮಾಡುವವರು ಇರುತ್ತಾರೆ. ಹಾಗಿದ್ದಾಗ ¥ರAಪಂಚದ ಬೇರೆಡೆಗಳಲ್ಲಿ ಅಂತಹ ಜನರನ್ನು ಅಸ್ಪೃಶ್ಯರೆಂದು ಏಕೆ ಕಾಣಲಿಲ್ಲ? ...ಅವರು ಆರ್ಯರ ಪಂಗಡಕ್ಕೆ ಸೇರಿದ್ದಾಗ್ಯೂ ಬ್ರಾಹ್ಮಣ, ಕ್ಷತ್ರಿಯ ಮತ್ತು ವೈಶ್ಯರು ಅಶುದ್ಧದಲ್ಲಿ ಅತಿ-ಅಶುದ್ಧ ಕಸುಬಾದ ಜಾಡಮಾಲಿಯ ಕೆಲಸದಲ್ಲಿ ತೊಡಗುತ್ತಿದ್ದರು. ಆರ್ಯನೊಬ್ಬನಿಗೆ ಈ ಕೆಲಸವು ಹೇಸಿಗೆಯಲ್ಲದಿದ್ದಲ್ಲಿ ಅಶುದ್ಧ ಕೆಲಸಗಳಲ್ಲಿ ತೊಡಗುತ್ತಿದ್ದುದು ಅಸ್ಪೃಶ್ಯತೆಗೆ ಕಾರಣವಾಯಿತೆಂದು ಹೇಗೆ ತಾನೇ ಹೇಳಲು ಸಾಧ್ಯ? ಆದ್ದರಿಂದ ಅಸ್ಪೃಶ್ಯತೆಗೆ ಅಶುದ್ಧ ಕಸುಬು ಕಾರಣವೆಂಬ ಸಿದ್ಧಾಂತದಲ್ಲಿ ಹುರುಳಿಲ್ಲ" (ಅಂಬೇಡ್ಕರ್, ೧೯೯೮: ೪೨೭-೪೨೮). ಈ ರೀತಿಯಾಗಿ ವೃತ್ತಿ ಆಧಾರಿತವಾಗಿ ಜಾತಿಯನ್ನು ಗುರುತಿಸುವುದು ಅಥವಾ ಜಾತಿಯು ವೃತ್ತಿಯ ಗುಂಪು ಎಂದು ಹೇಳುವುದು ಸಮಸ್ಯಾತ್ಮಕವಾಗುತ್ತದೆ ಎಂಬುದು ಅಂಬೇಡ್ಕರ್ ವಾದವಾಗಿತ್ತು. ಹಾಗೆಯೇ ಪ್ರತ್ಯೇಕತೆಗೆ, ಮಡಿಮೈಲಿಗೆ ಇತ್ಯಾಗಿ ಸಂಗತಿಗಳಿಗೆ ಸಂಬAಧಿಸಿದAತೆಯೂ ಸಹ ತಾರ್ಕಿಕ ಪ್ರಶ್ನೆಯನ್ನೆತ್ತುತ್ತಾರೆ.

**ಮಡಿಮೈಲಿಗೆ/ಪ್ರತ್ಯೇಕತೆ ಮತ್ತು ಜಾತಿವ್ಯವಸ್ಥೆ:**

ಜಾತಿವ್ಯವಸ್ಥೆಯ ಪ್ರಮುಖ ಲಕ್ಷಣಗಳಲ್ಲಿ ಸಾಮಾಜಿಕ ಪ್ರತ್ಯೇಕತೆ ಅಥವಾ ಮಡಿಮೈಲಿಗೆಯು ಪ್ರಮುಖವಾದುದು ಎಂದು ಸಮಾಜಶಾಸ್ತ್ರಜ್ಞರು ವ್ಯಾಖ್ಯಾನಿಸುತ್ತಾರೆ. ಉದಾಹರಣೆಗೆ ನೆಸ್‌ಫೀಲ್ಡ್‌ವರ ಪ್ರಕಾರ ಜಾತಿ ಎಂದರೆ, "ಸಮಾಜದ ಒಂದು ಗುಂಪು. ಇದು ಯಾವುದೇ ಇನ್ನೊಂದು ಗುಂಪಿನೊಂAದಿಗೆ ಯಾವುದೇ ಸಂಬAಧವನ್ನು ನಿರಾಕರಿಸುತ್ತದೆ..." (ಅಂಬೇಡ್ಕರ್, ೨೦೦೯: ೭). ಇದನ್ನೇ ಎಂಥೋವೆನ್‌ರವರ ಮಾತಿನಲ್ಲಿಡುವುದಾದರೆ; "ಜಾತಿ ಸ್ವರೂಪದ ಪ್ರಮುಖ ಸತ್ವ ಎನಿಸಿಕೊಂಡ ಸಹಭೋಜನ ಮತ್ತು ಅಂತರ್ಜಾತಿ ವಿವಾಹಕ್ಕೆ ನಿರ್ಬಂಧವಿದೆ... ಇದನ್ನು ನೋಡಿದರೆ, ಇಡೀ ಜಗತ್ತು ಎಂದೂ ಕಂಡಿಲ್ಲದ ಸಾಮಾಜಿಕ ಪ್ರತ್ಯೇಕತೆಯನ್ನು ಕಾಪಾಡುವ, ಅತ್ಯಂತ ಪರಿಪೂರ್ಣವಾದ ವ್ಯವಸ್ಥೆ ಎಂದು ಭಾರತೀಯ ಜಾತಿವ್ಯವಸ್ಥೆಯನ್ನು ಸ್ಥೂಲವಾಗಿ ಬಣ್ಣಿಸಬಹುದೇನೋ ಎಂದೆನಿಸುವAತಿದೆ" (ಎಂಥೋವೆನ್, ೧೯೯೦: ೧iii-೧iiii). ವರ್ಣವ್ಯವಸ್ಥೆಯ ಸಂಕೀರ್ಣ ರೂಪವಾದ

CO-ORDINATOR
IQAC
K.L.E.S' Arts & Commerce College
GADAG

PRINCIPAL
K.L.E.Society's
Arts & Commerce College
GADAG-BETGERI-582101

**Shodhak** : A Journal of Historical Research
ISSN : **0302-9832**
Volume: **53,** Issue: **02,** No: **08,** May - August : **2023**
ಜಾತಿವ್ಯವಸ್ಥೆಯ ಶ್ರೇಣಿಕರಣದಲ್ಲಿ ಜಾತಿಗಳ ಸ್ಥಾನ ಬದಲಾವಣೆಗೆ ನಿರ್ಬಂಧ ವಿಧಿಸಲಾಯಿತು. ಹಾಗೂ ವೃತ್ತಿ, ಶುದ್ಧತೆ-ಅಶುದ್ಧತೆ, ಆಚAರಣೆಗಳು, ಅಧಿಕಾರ ಇತ್ಯಾದಿ ಸಂಗತಿಗಳು ಜಾತಿಗಳ ಸ್ಥಾನಮಾನವನ್ನು ನಿರ್ಧರಿಸುವಂತಾಯಿತು (ದೂಮೋ, ೧೯೮೦: ೩೯. ಶ್ರೀನಿವಾಸ್ ಎಂ.ಎನ್. ೨೦೦೪: ೧೬೨).

ಅಂದರೆ, ಸಾಮಾಜಿಕ ಪ್ರತ್ಯೇಕತೆ ಹಾಗೂ ಮಡಿಮೈಲಿಗೆಯಂತಹ ಆಚರಣೆಗಳು ಜಾತಿಯ ಗುಣಲಕ್ಷಣವಾಗಿದೆ ಎಂದು ವಿವರಿಸಲಾಗಿದೆ. ಆದರೆ, ಅಂಬೇಡ್ಕರ್‌ರವರು ಇದನ್ನು ಸೆನಾರ್ಟ್‌ರವರ ವಾದವನ್ನು ವಿಮರ್ಶಿಸುವ ಮೂಲಕ ಅದರಲ್ಲಿನ ಗೊಂದಲಗಳನ್ನು ಅಸ್ಪಷ್ಟಪಡಿಸುತ್ತಾರೆ: "ಮೊದಲು ಸೆನಾರ್ಟ್‌ರವರಿಂದ ಆರಂಭಿಸುತ್ತೇನೆ. ಅವರು ಜಾತಿಯ ಒಂದು ಮುಖ್ಯ ಲಕ್ಷಣವೆಂದು 'ಮಾಲಿನ್ಯ ಪರಿಕಲ್ಪನೆ'ಯತ್ತ ಗಮನಸೆಳೆಯುತ್ತಾರೆ. ಯಾವುದೇ ರೀತುಯಲ್ಲಿಯೂ ಇದು ಜಾತಿಯ ವೈಶಿಷ್ಟಂತಯವಲ್ಲವೆಂದು ಈ ಅಂಶದ ಬಗ್ಗೆ ನಾನು ಧಾರಳವಾಗಿ ಹೇಳಬಹುದು. ಸಾಮಾನ್ಯವಾಗಿ ಇದು ಪುರೋಹಿತಶಾಹಿ ವಿಧಾನಗಳಲ್ಲಿ ಹುಟ್ಟಿಕೊಳ್ಳುತ್ತದೆ. ಅಲ್ಲದೆ ನಿರ್ದಿಷ್ಟ ವಿಚಾರವೊಂದಕ್ಕೆ ಸಂಬAಧಿಸಿದ ಪಾವಿತ್ರಂತಯದ ಬಗೆಗಿನ ಸಾಮಾನ್ಯ ನಂಬಿಕೆಯ ಭಾಗ ಇದು. ...ಜಾತಿಯು ಹೊರಗಿನವರೊಂದಿಗೆ ಕುಳಿತು ಊಟ ಮಾಡದಿರುವಿಕೆಯನ್ನು ಜಾತಿಯ ವಿಶೇಷತೆಗಳಲ್ಲೊಂದು ಎಂದು ನೆಸ್‌ಫೀಲ್ಡ್‌ರವರು ತಮ್ಮದೇ ದಾಟಿಯಲ್ಲಿ ವಿವರಿಸಿದ್ದಾರೆ. ಅವರ ವಿವರಣೆಯಲ್ಲಿ ಹೊಸ ಸಂಗತಿಯಿದ್ದರೂ ಇವರು ಪರಿಣಾಮವನ್ನೇ ಕಾರಣವೆಂದು ತಪ್ಪಾಗಿ ತಿಳಿದರೆಂದು ನಾವು ಹೇಳಬೇಕಾಗುತ್ತದೆ (ಅದೇ, ೮). ಸಾಮಾಜಿಕ ಪ್ರತ್ಯೇಕತೆಯ ಜಾತಿಯ ರಚನಾಂಶವಲ್ಲ. ಬದಲಾಗಿ, ಅದರ ಸ್ವಾಭಾವಿಕ ಲಕ್ಷಣವಾಗಿದೆ. ಹಾಗೂ ಮಡಿಮೈಲಿಗೆ ಎಂಬುದು ಜಾತಿಯ ಸಾಮಾನ್ಯ ಲಕ್ಷಣವಲ್ಲ ಬದಲಾಗಿ ಅದು ಒಂದು ಜಾತಿಯ ವಿಶೇಷ ಗುಣವಾಗಿದೆ. ಇದನ್ನು ಜಾತಿಯ ಲಕ್ಷಣವಾಗಿ ಸಾಮಾನ್ಯೀಕರಿಸಲು ಸಾಧ್ಯವಿಲ್ಲ ಎನ್ನುತ್ತಾರೆ.

**೩. ಅಂಬೇಡ್ಕರ್ ಚಿಂತನೆಯಲ್ಲಿ ಜಾತಿ ವಿಶ್ಲೇಷಣೆ:**

ಜಾತಿ ಹಾಗೂ ಜಾತಿವ್ಯವಸ್ಥೆಯ ಕುರಿತು ಇರುವ ಸಿದ್ಧಾಂತಗಳನ್ನು ವಿಮರ್ಶಿಸುವ ಮೂಲಕ ಅವುಗಳಿಗೆ ಎದುರಾಗುವ ಸವಾಲುಗಳನ್ನು ಚರ್ಚಿಸಿ, ಪರ್ಯಾಯವಾಗಿ ವಿವರಿಸುವ ಪ್ರಯತ್ನ ಮಾಡುತ್ತಾರೆ. ಅಂಬೇಡ್ಕರ್ ಅವರು ಭಾರತೀಯ ಸಮಾಜ ಹಿಂದೂ ರಿಲಿಜನ್ನಿನ ಆಧಾರದ ಮೇಲೆ ನಿರ್ಮಾಣವಾಗಿದ್ದು, ಇದರ ಪ್ರಮುಖ ಲಕ್ಷಣ ವರ್ಣವ್ಯವಸ್ಥೆಯಾಗಿದೆ. ಮೂಲತಃ ವರ್ಣವ್ಯವಸ್ಥೆಯು ಉತ್ತಮವಾಗಿದ್ದು ನಂತರ ಬ್ರಾಹ್ಮಣರು ತಮ್ಮನ್ನು ತಾವು ಇತರರಿಂದ ಬೇರ್ಪಡಿಸಿಕೊಂಡರು. ಪರಿಣಾಮವಾಗಿ ತಾವೇ ಒಂದು ಜಾತಿಯಾದರು, ನಂತರ ಉಳಿದ ಜಾತಿಗಳೂ ಅವರನ್ನೇ ಅನುಕರಿಸಿದವು ಎನ್ನುತ್ತಾರೆ: "ಹಿಂದೂ ಸಮಾಜವು ಇತರ ಸಮಾಜಗಳ ರೀತಿಯಲ್ಲಿಯೇ ವರ್ಗಗಳಿಂದ ಕೂಡಿದ್ದವು ಎಂಬುದನ್ನು ಪ್ರಾರಂಭದಲ್ಲಿಯೇ ನೆನಪಿಗೆ ತಂದುಕೊಳ್ಳುವುದು ಒಳ್ಳೆಯದು. ನಮಗೆ ತಿಳಿದು ಬಂದಿರುವ ಪ್ರಾರಂಭದ ವರ್ಗಗಳು: ೧. ಬ್ರಾಹ್ಮಣರು ಅಥವಾ ಪುರೋಹಿತ ವರ್ಗ. ೨. ಕ್ಷತ್ರಿಯರು ಅಥವಾ ಸೈನಿಕ ವರ್ಗ. ೩. ವೈಶ್ಯರು ಅಥವಾ ವರ್ತಕ ವರ್ಗ. ಮತ್ತು ೪. ಶೂದ್ರರು ಅಥವಾ ಕುಶಲಕರ್ಮಿಗಳು ಹಾಗೂ ದಾಸ್ಯ ವೃತ್ತಿಯವರು. ಇದು ಮೂಲಭೂತವಾಗಿ ಒಂದು ವರ್ಗವ್ಯವಸ್ಥೆಯಾಗಿತ್ತು. ...ಹಿಂದೂಗಳ ಇತಿಹಾಸದ ಯಾವುದೋ ಒಂದು ಹಂತದಲ್ಲಿ ಪುರೋಹಿತ ವರ್ಗ ಸಾಮಾಜಿಕವಾಗಿ ಉಳಿದ ವರ್ಗಗಳಿಂದ ತಾನಾಗಿ ಬೇರ್ಪಟ್ಟಿತು ಮತ್ತು ತನ್ನ ಬಾಗಿಲು ಮುಚ್ಚುವ ವರ್ತನೆಯಿಂದಾಗಿ ತಾನೇ ಒಂದು ಜಾತಿಯಾಗಿ ಪರಿವರ್ತನೆಗೊಂಡಿತು. ಸಾಮಾಜಿಕ ಶ್ರಮ ವಿಭಜನೆಯ ಕಟ್ಟಳೆಗೆ ಒಳಪಟ್ಟು ಉಳಿದ ವರ್ಗಗಳು ತಾರತಮ್ಯಗಳಿಗೆ ಒಳಗಾದವು: ಕೆಲವು ದೊಡ್ಡ ಗುಂಪುಗಳಾದರೆ ಉಳಿದವು ಸಣ್ಣಪುಟ್ಟ ಗುಂಪುಗಳಾದವು..." (ಅಂಬೇಡ್ಕರ್, ಸಂ-೧ ೨೦೧೯: ೧೮).

ಈ ಹಂತದಲ್ಲಿ, ಜಾತಿಯ ಉಗಮದ ಕುರಿತು ವಿವರಿಸುವಾಗ ಅಂಬೇಡ್ಕರ್‌ರವರೂ ಸಹ ಜಾತಿಗಳು ವೃತ್ತಿ ಆಧಾರಿತ ಗುಂಪುಗಳಾಗಿವೆ. ಈ ವೃತ್ತಿ ಆಧಾರಿತ ಗುಂಪುಗಳಾಗಿ ಜಾತಿಗಳು ಅಸ್ತಿತ್ವವನ್ನು ಪಡೆದುಕೊಳ್ಳಲು ಬ್ರಾಹ್ಮಣ ವರ್ಣದವರು ಪ್ರಮುಖ ಕಾರಣವಾಗುತ್ತಾರೆ. ಈ ವೃತ್ತಿ ಆಧಾರಿತ ವರ್ಗೀಕರಣವನ್ನು ಅರ್ಥಮಾಡಿಕೊಳ್ಳಲು ಹಿಂದೂಯಿಸA ಮತ್ತು ಅದರ ವರ್ಣವ್ಯವಸ್ಥೆಯನ್ನು ಪೂರ್ವಭಾವಿಯಾಗಿ ಇಟ್ಟುಕೊಳ್ಳಬೇಕಾದುದು ಅತ್ಯಗತ್ಯ ಎನ್ನುವ ನಿಲುವಿಗೆ

CO-ORDINATOR
IQAC
K.L.E.S' Arts & Commerce College
GADAG



PRINCIPAL
K.L.E.Society's
Arts & Commerce College
GADAG-BETGERI-582101

**Shodhak** : A Journal of Historical Research
ISSN : **0302-9832**
Volume: **53,** Issue: **02,** No: **08,** May - August : **2023**

ಬರುತ್ತಾರೆ. ಹಾಗೂ ಸ್ವಜಾತಿ ವಿವಾಹವು ಜಾತಿಯ ರಚನಾಂಶವಾಗಿದೆ. ಹಾಗೂ ಅದರಿಂದ ಮಾತ್ರವೇ ಜಾತಿಯನ್ನು ವಿವರಿಸಲು ಸಾಧ್ಯವೆಂದು ವಾದಿಸುತ್ತಾರೆ: "ಭಾರತದಲ್ಲಿ ಜಾತಿಯೆಂದರೆ ಸ್ವಜಾತಿ ಮದುವೆಯ ಆಚರಣೆಯೊಂದಿಗೆ, ಅಂತರ್ಜಾತಿ ವಿವಾಹವನ್ನು ನಿಷೇಧಿಸುತ್ತಾ, ಒಂದು ಗುಂಪು ಇನ್ನೊಂದರೊಡನೆ ಸಮ್ಮಿಳಿತವಾಗದಂತೆ ತಡೆಯುವ ಮೂಲಕ ಒಟ್ಟು ಜನಸಂಖ್ಯೆಯನ್ನು ಸ್ಥಿರ ಮತ್ತು ನಿರ್ದಿಷ್ಟ ಘಟಕಗಳ ನಡುವೆ ಕೃತಕವಾಗಿ ಕತ್ತರಿಸಿ ಹಂಚುವ ಪ್ರಕ್ರಿಯೆ. ಹೀಗಾಗಿ ಸ್ವಜಾತಿ ವಿವಾಹವು ಜಾತಿಗೇ ವಿಶಿಷ್ಟವಾದ ಏಕೈಕ ಗುಣವೆಂದು ತೀರ್ಮಾನಿಸುವುದು ಅನಿವಾರ್ಯ. ಸ್ವಜಾತಿ ವಿವಾಹವನ್ನು ಹೇಗೆ ಕಾಪಾಡಿಕೊಳ್ಳಲಾಗಿದೆ ಎಂಬುದನ್ನು ತೋರಿಸುವಲ್ಲಿ ನಾವು ಯಶಸ್ವಿಯಾದರೆ ಅಲ್ಲಿಗೆ ಜಾತಿಯ ಉತ್ಪತ್ತಿ ಮತ್ತು ರಚನೆಯನ್ನು ವಾಸ್ತವವಾಗಿ ಸಾಧಿಸಿದಂತೆಯೇ" (ಅಂಬೇಡ್ಕರ್, ೨೦೦೯: ೮-೯).

*ಅಂಬೇಡ್ಕರ್‌ರವರೊAದಿಗೆ ಇನ್ನೂ ಅನೇಕ ಚಿಂತಕರು ಸ್ವಜಾತಿ ವಿವಾಹವು ಜಾತಿಯ ಅಂತಃಸತ್ವವಾಗಿದ್ದು, ಸಾಮಾಜಿಕ ಗುಂಪುಗಳನ್ನು ಪರಸ್ಪರ ಪ್ರAರತ್ಯೇಕಿಸುವ ಹಾಗೂ ಅವುಗಳನ್ನು ಜಾತಿಯನ್ನಾಗಿಸುವ ಏಕೈಕ ಅಂಶವಾಗಿದೆ ಎಂದು ಪ್ರತಿಪಾದಿಸಿದ್ದಾರೆ. ಅವರ ಪ್ರಕಾರ, ಜಾತಿಯನ್ನು ಈ ಸಂಗತಿಯ ಮೂಲಕ ಸ್ಪಷ್ಟವಾಗಿ ಗುರುತಿಸಲು ಸಾಧ್ಯವಿದೆ. ಅಂದರೆ 'ಆಂತರಿಕ ವಿವಾಹವೇ ಜಾತಿಯ ಮೂಲವಾಗಿದ್ದು, ಸ್ವಜಾತಿ ವಿವಾಹದ ಗುಂಪೇ ಜಾತಿಯಾಗಿದೆ (ಘುರೆ, ೧೯೩೨: ೨೨೧). 'ಆಂತರಿಕ ವಿವಾಹದ ಮೂಲಕ ಜಾತಿಯನ್ನು, ಜಾತಿಯ ಶುದ್ಧತೆಯನ್ನು ಕಾಪಾಡಿಕೊಂಡು ಬರಲಾಗುತ್ತದೆ', ಅಂದರೆ ಜಾತಿಗಳು ರಕ್ತ ಸಂಬAಧದ ಮುಂದುವರಿಕೆಯಾಗಿದೆ (ಕರ್ವೆ, ೧೯೫೫: ೫). ಅದಕ್ಕಾಗಿಯೇ 'ಜಾತಿವ್ಯವಸ್ಥೆಯು ಅಂರ್ಜಾತಿ ವಿವಾಹವನ್ನು ನಿಷೇಧಿಸುತ್ತವೆ (ಅಂಬೇಡ್ಕರ್, ೨೦೦೯: ೧೮-೧೯). ಆದ್ದರಿಂದ ಜಾತಿಯ ಮೂಲವೇ ಸ್ವಜಾತಿ ವಿವಾಹವಾಗಿದ್ದು, ಇದು ಜಾತಿಯನ್ನು ನಿರ್ಧರಿಸುವಲ್ಲಿ ಪ್ರಮುಖ ಪಾತ್ರವಹಿಸುತ್ತದೆ ಅಥವಾ ಜಾತಿಯನ್ನು ರಚಿಸುವ ಸಂಗತಿ. ಜಾತಿಯೆಂಬುದು ಸ್ವಜಾತಿ ವಿವಾಹದ ಗುಂಪು ಎಂದು ಪ್ರತಿಪಾದಿಸಲಾಗುತ್ತದೆ. ಈ ನೆಲೆಯಲ್ಲಿಯೇ ಅಂತರ್ಜಾತಿವಿವಾಹವನ್ನು ಜಾತಿವಿನಾಶದ ಏಕೈಕ ಪರಿಹಾರಮಾರ್ಗವಾಗಿ ಪರಿಗಣಿಸಲಾಗಿದೆ. ಜಾತಿಯ ಅಂತಃಸತ್ವವು ಸ್ವಜಾತಿವಿವಾಹವಾದ್ದರಿಂದ ಅಂತರ್ಜಾತಿ ವಿವಾಹದಿಂದ ಜಾತಿ ಹಾಗೂ ಜಾತಿವ್ಯವಸ್ಥೆ ನಿರ್ಮೂಲನೆಯಾಗುತ್ತದೆ ಎಂದು ಪರಿಭಾವಿಸಲಾಗಿತ್ತು. ಸಾಮಾಜಿಕ ಚಳವಳಿಗಳೂ ಸಹ ಈ ನೆಲೆಯಲ್ಲಿ ಅಂತರ್ಜಾತಿ ವಿವಾಹವನ್ನು ಪ್ರೋತ್ಸಾಹಿಸಲಾರಂಭಿಸಿದವು.*

**೪. ಸಮಾರೋಪ**

ಹೀಗಿದ್ದರೂ ಪ್ರಸ್ತುತ ದಿನಗಳಲ್ಲಿಯೂ ಜಾತಿವ್ಯವಸ್ಥೆಯ ನಿರ್ಮೂಲನೆಯ ಚರ್ಚೆಗಳು ಪ್ರಚಲಿತದಲ್ಲಿರುವುದು ಸೋಜಿಗವೆನಿಸುತ್ತದೆ. ಅಂದರೆ, ಸ್ವತಂತ್ರ ಪೂರ್ವದಿಂದಲೂ ಜಾತಿವಿನಾಶದ ಕುರಿತು ಚಳವಳಿಗಳು ನಡೆಯುತ್ತಿದ್ದರೂ ಸಹ ಜಾತಿವ್ಯವಸ್ಥೆಯು ತನ್ನ ಅಸ್ತಿತ್ವವನ್ನು ಉಲಿಸಿಕೊಂಡು ಬರುತ್ತಿದೆ ಎನ್ನುವ ಹತಾಶೆಯು ವ್ಯಕ್ತವಾಗುತ್ತಿದೆ. ಇದನ್ನು ಅರ್ಥಮಾಡಿಕೊಳ್ಳಲು ಜಾತಿವ್ಯವಸ್ಥೆಯ ಸಿದ್ಧಾಂತಗಳ ಕುರಿತ ಅಂಬೇಡ್ಕರ್‌ರವರ ಪರಾಮರ್ಶೆಯು ಸಹಕರಿಸುವ ಸಾಧ್ಯತೆ ಇದೆ. ಏಕೆಂದರೆ, ಇಂದಿಗೂ ಜಾತಿವಿನಾಶದ ಚಳವಳಿಗಳು ಜಾತಿಯ ಕುರಿತ ವೃತ್ತಿ, ಮಡಿಮೈಲಿಗೆ, ಶ್ರೇಣೀಕರಣದಂತಹ ಸಂಗತಿಗಳನ್ನೇ ಜಾತಿಯ ಲಕ್ಷಣಗಳೆಂದು ಅವುಗಳ ವಿರುದ್ಧ ಹೋರಾಡುತ್ತಿವೆ. ಆದರೆ, ಅಂಬೇಡ್ಕರ್‌ರವರು ಅವುಗಳನ್ನು ಜಾತಿಯ ಲಕ್ಷಣವೆಂದು ಅಥವಾ ರಚನಾಂಶವೆAದು ಗುರುತಿಸಲು ಇರುವ ಸವಾಲುಗಳನ್ನು ವಿವರಿಸುವ ಮೂಲಕ ತಾರ್ಕಿಕವಾಗಿಯೇ ಆ ಸಿದ್ಧಾಂತಗಳಲಿನ ಸಮಸ್ಯೆಗಳನ್ನು ಸ್ಪಷ್ಟಪಡಿಸಿದ್ದಾರೆ. ಹಾಗೂ ಜಾತಿಯನ್ನು ವಿವರಿಸಲು ಪರ್ಯಾಯ ವಿವರಣೆಯ ಅಗತ್ಯತೆಯನ್ನು ಸೂಚಿಸುತ್ತಾರೆ. ಜಾತಿಯ ಕುರಿತು ಅಂಬೇಡ್ಕರ್ ಸ್ವಾಜಾತಿ ವಿವಾಹ ಒಂದೇ ಜಾತಿಯನ್ನು ವಿವರಿಸಲು ಇರುವ ಏಕೈಕಮಾರ್ಗವೆಂದು ವಾದಿಸುತ್ತಾರೆ. ಆದರೆ, ಆ ಕುರಿತೂ ಸಮಾಜಶಾಸ್ತ್ರಜ್ಞರಲ್ಲಿ ಭಿನ್ನಾಭಿಪ್ರಾಯಗಳಿದ್ದು, ಸ್ವಜಾತಿವಿವಾಹವು ಜಾತಿಯ ರಚನಾಂಶವೋ? ಜಾತಿಯ ಲಕ್ಷಣವೋ? ಉಪಜಾತಿಯ ಲಕ್ಷಣವೋ? ಎನ್ನುವ ಸಮಸ್ಯೆಗಳಿವೆ. ಆದರೆ, ಜಾತಿವ್ಯವಸ್ಥೆಯ ಕುರಿತು ಇರುವ ಸಮಸ್ಯೆಗಳನ್ನು ಅರ್ಥಮಾಡಿಕೊಳ್ಳಲು ಹಾಗೂ ಹೊಸ ಸಿದ್ಧಾಂತಗಳನ್ನು ಬೆಳಸಲು ಅಂಬೇಡ್ಕರ್‌ರವರ ಕೊಡುಗೆಯು ಮಹತ್ವದ್ದಾಗಿದೆ. ಇದರ ಮಹತ್ವವು ಜಾತಿಯ ಕುರಿತು ಹೊಸ



IQAC
K.L.E.S' Arts & Commerce College
GADAG

PRINCIPAL
K.L.E.Society's
Arts & Commerce College
GADAG-BETGERI-582101

**Shodhak** : A Journal of Historical Research
ISSN : **0302-9832**
Volume: **53,** Issue: **02,** No: **08,** May - August : **2023**
ಸಿದ್ಧಾಂತಗಳನ್ನು ಬೆಳೆಸುವುದರಿಂದ ದ್ವಿಗುಣಗೊಳ್ಳುತ್ತದೆ ಹಾಗೂ ಅಂಬೇಡ್ಕರ್ ವಾದವನ್ನು ಮತ್ತಷ್ಟು ಮುಂದೊತ್ತಿದAತಾಗುತ್ತದೆ.

**ಆಧಾರ ಗ್ರಂಥಗಳು**:

- ಅಂಬೇಡ್ಕರ್, ಬಿ. ಆರ್. ೨೦೦೯. ಡಾ. ಬಾಬಾ ಸಾಹೇಬ್ ಅಂಬೇಡ್ಕರ್‌ರವರ ಸಮಗ್ರ ಬರಹ ಮತ್ತು ಭಾಷಣಗಳು ಸಂಪುಟ-೧. ಬೆಂಗಳೂರು: ಕನ್ನಡ ಮತ್ತು ಸಂಸ್ಕೃತಿ ಇಲಾಖೆ.
- • ರಾಜಶೇಖರಯ್ಯ, ಎ. ಎಮ್. (ಸಂ). ೧೯೯೭. ಡಾ|| ಬಾಬಾಸಾಹೇಬ್ ಅಂಬೇಡ್ಕರ್ ಬರಹಗಳು ಮತ್ತು ಭಾಷಣಗಳು. ಬೆಂಗಳೂರು: ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ.
- • ಶ್ರೀನಿವಾಸ್, ಎಲ್. ೨೦೧೦. ಪರಿವರ್ತನೆಯ ಹಾದಿಯಲ್ಲಿ ಬುಡಕಟ್ಟು ಸಮಾಜಗಳು. ಹಂಪಿ: ಪ್ರಸಾರಾಂಗ ಕನ್ನಡ ವಿಶ್ವವಿದ್ಯಾನಿಲಯ.
- Bougle, C. 1958. *The Essence and Reality of the Caste System.* New Delhi: Oxford University Press.
- Dubois, Abbe. 1992. *People of India.* New Delhi : Asian Education Services.
- Dubois, Abbe. 2001. *Hindu Manners, Customs and Cermonies*. New Delhi : Asian Education Services.
- Dumont, Louis. 1998. *Homo Hierarchicus*. New Delhi: Oxford University Press.
- Enthoven, R. E. 1990. *The Tribes and Castes of Bombay*. Vo-I, New Delhi: Asian Education Services.
- Enthoven, R. E. 1990. *The Tribes and Castes of Bombay*. Vo-II. New Delhi: Asian Education Services.
- Ghurey, G. S. 1969. *Caste and Race in India*. Bombay: Bombay Popular Prakashan.
- Karve, Iravati. 1953. Kinship Organization in India. Bombay: Asia Publishing House.
- Karve, Iravati. 1956. *Caste in Modern Time.* Report of the seminar on Castism: Bombay.
- Risley, Herbert. 1915. *The People of India*. New Delhi : Asian Education Services.
- Srinivas M. N. 2004. *Collected Essays.* New Delhi: Oxford University Press.
- Thurston, Edgar. 2001. *Castes and Tribes of Southern India*. Vo-II. New Delhi : Asian Education Services.

PRINCIPAL
K.L.E.Society's
...ts & Commerce College
GADAG-BETGERI-582101